ನನ್ನ ಕಣ್ಣುಗೊಳು ಇಂಥಾ ಹೀನ ಕೃತ್ಯಗೊಳಿಗೆ, ದುರ್ಘಟನೆಗಳಿಗೆ ಸಾಕ್ಷಿ ಆಗಾಕತ್ಯಾವಲ್ಲ ಅಂತ. ಅಮಾನವೀಯ ಇಂಥಾ ಕೃತ್ಯ ನೋಡಾಕ ಆಗವಲ್ದ ನನಗ. ಕೆಲವೊಮ್ಮೆ ಅನಸತೈತಿ ನನ್ನ ಮೂರ್ತಿಯಿಂದನ ಹಿಂಗೆಲ್ಲಾ ಆಗಾಕ ಹತಂತ ಮನಸ ಕೊರಗತೈತಿ. ಅದಕ ದಯಮಾಡಿ ನನ್ನ ಪ್ರತಿಮೆನ ಇಲ್ಲಿಂದ ತೆಗೆಸಿಬಿಡ್ರಿ. ನನ್ನ ದೆಸೆಯಿಂದ ಅಮಾಯಕರಿಗೂ ಆಗೂ ತ್ರಾಸಾದರೂ ದೂರ ಆಗತೈತಿ' ಎಂಬ ದುಃಖದ ಧ್ವನಿಯಲ್ಲಿ ಹೇಳಿದರು ಪ್ರತಾಪ್‌ಮೋಹನ್, 'ಏನ ಹೇಳ್ತೀರಿ ಸರ್ ನೀವು. ದಯಮಾಡಿ ಆ ಮಾತ ಆಡಬ್ಯಾಡ್ರಿ. ತಾವು ಈ ನಾಡಿಗಷ್ಟ ಅಲ್ಲ, ಇಡೀ ದೇಶನ ಹೆಮ್ಮೆ ಪಡುವಂಥ ವೀರಪುತ್ರ ಅದಿರಿ. ತಮ್ಮ ಸಾಹಸಗಾಥೆ ಬಗ್ಗೆ ನಮಗೆಲ್ಲಾರಿಗೂ ಅದೆಷ್ಟ ಹೆಮ್ಮೆ ಐತೆಂದ್ರ ಎಷ್ಟೋ ಮನಿಯಾಗ ನಿಮ್ಮ ಫೋಟೊ ಇಟ್ಟ ಪೂಜೆ ಮಾಡ್ತಿವಿ. ಬ್ಯಾರೆ ಯಾಕ ನಮ್ಮ ಮನಿಯಾಗ ನಿಮ್ಮ ಫೋಟೊಕ ದಿನಾ ಪೂಜೆ ಮಾಡ್ತಿವಿ. ಯಾರೋ ಒಬ್ಬ ಕಿಡಿಗೇಡಿ ಮಾಡಿದ ಕೆಲಸಕ ತಾವ್ಯಾಕ ಇಷ್ಟ ನೊಂದಕೊತಿರಿ. ನಿಮ್ಮಿಂದ ಯಾಕ ಆಗ್ತಾವ ಇಂಥಾ ಘಟನಾ. ನೀವ ನಮ್ಮ ನಾಡಿನ ಗೌರವ.'

'ಇಲ್ಲ... ಇಷ್ಟ ವರ್ಷಗಳಿಂದಾನೂ ನನ್ನ ಎದುರಿಗೆ ನಡೆದಂತಾ ಎಷ್ಟೋ ಘಟನೆಗಳಿಗೆ ಸಾಕ್ಷಿಯಾಗಿ ನಿಂತಿನಿ. ಆದ್ರ ನಾನು ಏನೂ ಮಾಡಲಾರದ ಅಸಹಾಯಕನಂಗ ನೋಡೋದು ನನ್ನಿಂದ ಆಗವಲ್ದ. ಛೇ ಎಂಥಾ ಘೋರ ದುರಂತಗೊಳ ಕಣ್ಣ ಮುಚ್ಚಿ ಕಣ್ಣ ತೆರೆಯೊದೊಳಗ ನಡಿತಾವಂತ ಮನಸ ಚಡಪಡಿಸತೈತಿ. ನಂಗೇನಾದ್ರೂ ಜೀವ ಇದ್ರ ಇಂತಹ ಕೃತ್ಯ ಮಾಡೋರನ್ನ ಇಲ್ಲೇ ಸುಟ್ಟ ಹಾಕುತ್ತಿದ್ಯಾ... ಎತ್ತಾಗ ಹೋಗ್ತಾ ಅದಾರಲಾ ನನ್ನ ದೇಶದ ಜನ. ಇದಕ್ಕನ... ನನ್ನ ತಂದೆಯಂತಾ ಸಾವಿರಾರು ಮಂದಿ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ನೆತ್ತರಾನ ಬಸಿದದ್ದ, ನನ್ನಂಥಾ ನೂರಾರು ಸೈನಿಕ್ರೂ ಗಡಿಯಾಗ ಹೋರಾಡಿ ಪ್ರಾಣ ಬಿಟ್ಟದ್ದೂ..ಅನೇಕ ಮಹಾತ್ಮರ ಕಂಡ ಕನಸಿನ ಭಾರತ ಇದ ಅನ..?'

'ಬ್ಯಾಡ ಸರ್, ಹಂಗ ಬ್ಯಾಸರ ಮಾಡ್ಕೋಬ್ಯಾಡ್ರಿ. ಖಂಡಿತ ನಮ್ಮ ಭಾರತಕ್ಕ ಭವ್ಯ ಭವಿಷ್ಯ ಐತಿ. ಸ್ವಾತಂತ್ರ್ಯಕ್ಕ ಹೋರಾಡಿದ ನಿಮ್ಮಂಥ ಕೆಚ್ಚೆದೆಯ ಯೋಧರ ಎಲ್ಲಾ ಕನಸೂ ಸಾಕಾರ ಆಗ್ತಾವ.'

'ಇಲ್ಲ, ನನ ದುಃಖಕ್ಕ, ಕೋಪಕ್ಕ ಕೇವಲ ನಿನ್ನೆ ನಡೆದಂತಾ ಘಟನೆ ಅಷ್ಟ ಕಾರಣ ಅಲ್ಲ. ಅದಕ ಹಲವಾರ ಆಯಾಮ ಅದಾವು, ಆಗ್ಲೇ ಹೇಳಿನಲಾ ವೈರಿ ಸೈನಿಕ್ರ ರಕ್ತ ಚೆಂಡಾಡಿದವ ನಾ. ಆದ್ರ ನನ್ನ ದೇಶದ ಜನಾ ತಮ್ಮೊರ ರಕ್ತ ಚೆಲ್ಲಾಡತಾ ಅದಾರಲಾ. ಅದನ್ನ ನೋಡ್ಲಿಕ ಆಗವಲ್ದ. ನಮ್ಮಂದ ನಡೆದ ಅಮಾನವೀಯ ಕೃತ್ಯಗೊಳು ನನ್ನ ಕಣ್ಣಾಗ ನೀರಲ್ಲ ರಕ್ತ ಬರೂವಂಗ ಮಾಡಾಕತ್ಯಾವ. ನಿಮಗ ನೆನಪಿರಬೌದ. ಈಗ ಕೆಲವರ್ಷಗಳಿಂದ ಇಲ್ಲಿ ನಡೆಯುತ್ತಿರೋ ಘಟನೆಗಳಿಗೆ ಕೊನಿನ ಇಲ್ಲ. ಬಹುಶಃ ಆ ಘಟನೆಗೊಳು ನಿಮಗೂ ನೆನಪಿರಬೌದು..?'

'ಹೌದು ಸರ್, ಅನಾಗರಿಕರಂಗ ವರ್ತಿಸಿ ನಡೆದಂತಾ ಆ ಕ್ರೂರ ಕೃತ್ಯಗೊಳು ಸ್ವಲ್ಪ ಸ್ವಲ್ಪ ನೆನಪ ಅದಾವು. ಖರೇವಂದ್ರ ಇಡೀ ಮಾನವ ಕುಲಾನ ತಲಿ ತಗ್ಗಿಸುವಂತ ಹೀನ ಕೆಲಸ ಅವು'

'ಆ ಘಟನಾ ನಿಮಗ ಪೂರಾ ನೆನಪಿಗೆ ತರ್ತಿನಿ. ಅಲ್ದ, ಆ ಘಟನೆಗಳ ಜೊತಿಗೆ ನನ್ನನ್ನ ಪ್ರತಿಮೆಯನ್ನಾಗಿ ಸ್ಥಾಪಿಸಿದ್ದಕ್ಕೆ ತಮಗೆ ಹೇಳ್ತಿನಿ ಕೇಳ್ರಿ' ಎಂದು ಆ ಘಟನೆಗಳ ಕಥೆಯನ್ನು ಹೇಳಲು ಶುರು ಮಾಡಿದಾಗ ಮನೆಯ ಹಿರಿಯನೊಬ್ಬ ಕಥೆ ಹೇಳುವಾಗ ಶ್ರದ್ಧೆಯಿಂದ ಕೈಕಟ್ಟಿ ಕುಳಿತು ಕೇಳುವ ಮಗುವಿನಂತೆ ಜಗದೀಶ ಕೇಳುತ್ತಾ ಪ್ರತಿಮೆ ಮುಂದೆ ಕುಳಿತ.

*

ನಾನು ಸತ್ತ ನಂತರ ಈ ನಗರದಲ್ಲಿ ಮೊದಲ ಮಾಡಿದ್ದೇ ರಸ್ತೆಗೆ ನನ್ನ ಹೆಸರಿಟ್ಟದ್ದು. ತದ ನಂತರ ಈ ಪ್ರತಿಮೆಯನ್ನು ಸ್ಥಾಪಿಸಿದರು. ಅದಾವ ಘಳಿಗೆಯಲ್ಲಿ ನನ್ನ ಪ್ರತಿಮೆ ಸ್ಥಾಪನೆಯಾಯಿತೋ ಪದೇ ಪದೇ ಇಂತಹ ಘಟನೆಗಳು ನನ್ನ ಎದುರಲ್ಲಿಯೇ ಜರುಗುತ್ತಿವೆ. ಆ ಪಾಪ ಕೃತ್ಯಗಳನ್ನು ಈ ಕಣ್ಣುಗಳಿಂದ ನೋಡಬೇಕಾಗಿರುವ ಪ್ರಾರಬ್ಧ ನನ್ನದು. ನನ್ನ ಪ್ರತಿಮೆ ಬಂದ ಇಷ್ಟು ವರ್ಷಗಳಲ್ಲಿ ಅನೇಕ ಕೊಲೆ, ಅತ್ಯಾಚಾರದಂತಹ ಕ್ರೂರ ಘಟನೆಗಳು ಕಣ್ಣೆದುರು ನಡೆದರೂ ಅಸಹಾಯಕನಂತೆ ನಿಂತಿರುತ್ತೇನಲ್ಲ ಇದಕ್ಕಿಂತ ದೌರ್ಭಾಗ್ಯ ಒಬ್ಬ ಸೈನಿಕನಿಗೆ ಏನಿದೆ...? ಇಂತಹ ಅನೇಕ ಘಟನೆಗಳಲ್ಲಿ ಇತ್ತೀಚಿನ ತಾರಾಳ ಪ್ರಕರಣ, ಪ್ರಕಾಶನ ಅಪಘಾತ ಪ್ರಕರಣ ನಿನ್ನೆಯ ಶಶಿರೇಖಾಳ ಘಟನೆ ನನ್ನನ್ನು ಚಿಂತಿಗೀಡ ಮಾಡ್ಯಾವ. ತಾರಾ, ಪ್ರಕಾಶರ ಘಟನೆಗಳನ್ನು ಹೇಳ್ತೀನಿ ಕೇಳ್ರಿ.